ಮುಂದುವರಿದು ಬಂತು. ಅವರ ಈ ಆತ್ಮಚರಿತ್ರೆಯ ಭಾಷಾ ರಚನೆ ನನ್ನ ಇಷ್ಟವಾಯ್ತು. ಸಿಟ್ಟು ಚಡಪಡಿಕೆ ಇದ್ರೂ ತಪ್ಪಾಗಿ ನಡಕೊಂಡಿದ್ದು ಕಾಣಲ್ಲ. ಅವರ ಸಿಡಕು ಸ್ವಭಾವಕ್ಕೆ ತಕ್ಷಣ ಬೇಸ್ರ ಮಾಡಿಕೊಂಡವರು ಮತ್ತೆ ಅವರ ಸಂಪರ್ಕ ಬಯಸ್ತಿದ್ರು. ಕೆಲವರಿಗೆ ಎದಎದಕೊ ಸಹಾಯ ಮಾಡಿದ್ದಾರೆ. ರಿಸ್ಕ್ ತಗೊಂಡು ಸಹಾಯ ಮಾಡಿದ್ದಾರ...

'ಗುರುರಾಜ್, ಓಕೆ. ಅಪ್ಪನ ಅಣ್ಣ ರಾಮಲಿಂಗಪ್ಪ ಅಂದ್ರ ನನ್ನ ದೊಡ್ಡಪ್ಪನ ಬಗ್ಗೆ ಅಪ್ಪ ನಡಕೊಂಡದ್ದು ಅತಿಯಾಯ್ತು ಅನಸ್ತದ. ಮೇಲಾಗಿ ಅಣ್ಣ-ತಮ್ಮರ ನಡುವೆ ಹೀಗೆ ನಡದೋಯ್ತಾ ಅಂತ ಜನಕ್ಕೆ ತಿಳಿಬಾರ್ದು. ದೊಡ್ಡಪ್ಪ ನಮ್ಮ ಮನೆಗೆ ಬರ್ತಿದ್ರು. ನನ್ನ ಎತ್ತಿ ಆಡಿಸಿದ್ದಾರ. ಅದನ್ನು ನಾನು ಮರ್ತಿಲ್ಲ. ಅದ್ಕ ಆ ಭಾಗವನ್ನು ರಿಪೇರಿ ಮಾಡಬೇಕು...' 'ದಾಯಾದಿ ಕಲಹ ಅದು! ಶಾಂತಲಿಂಗಪ್ಪನವರು ಬಹಳ ತಿಳಿ ಹೇಳಿದ್ರೂ ಅವರ ಅಣ್ಣ ಕೇಳಲಿಲ್ಲ. 'ನನ್ಗ ಹೊಲದಲ್ಲಿ ಪಾಲು ಕೊಡು! ಆದ್ರ ಬೆಳೆ ಬೆಳೆದು ನೀನೇ ಉಣ್ಣು' ಎಂದು ಗುರುಗಳು ತಿಳಿ ಹೇಳಿದ್ರೂ ಕೇಳದಿದ್ದಾಗ ಅನಿವಾರ್ಯವಾಗಿ ಪೊಲೀಸ್ ಕಚೇರಿ, ಲಾಯರ್, ಕೋರ್ಟುಗಳ ಮೊರೆ ಹೋಗಿದ್ದಾರೆ ಶಾಂತಲಿಂಗಪ್ಪ ಗುರುಗಳು'.

'ಅದೆಲ್ಲ ಸರಿ' ಎಂದ ವೇದವತಿ ಸುಮ್ಮನಾದಳು. ಗುರುರಾಜನ ಮನಸ್ಸಿನಲ್ಲಿಯೂ ಆ ಸನ್ನಿವೇಶ ಮೂಡಿತು. ಅದನ್ನು ನಿರೂಪಿಸತೊಡಗಿದ. 'ಹಳ್ಳಿಯಲ್ಲಿದ್ದ ರೈತ ಮಲ್ಲಣ್ಣ-ಬಸ್ಸಮ್ಮ ದಂಪತಿಗಳಿಗೆ ರಾಮಲಿಂಗಪ್ಪ-ಶಾಂತಲಿಂಗಪ್ಪ ಗುಂಡುಮಕ್ಕಳಿಬ್ಬರು ಇದ್ದಂತೆ ಮೂವ್ವರು ಹೆಣ್ಣುಮಕ್ಕಳಿದ್ದರು. ಉಂಡು, ಉಟ್ಟು, ಹಬ್ಬ-ಹರಿದಿನಗಳನ್ನು ನಡೆಸಿಕೊಂಡು ಬರುವಷ್ಟು ಆದಾಯ ವ್ಯವಸಾಯದಿಂದ ಬರುತ್ತಿತ್ತು. ರಾಮಲಿಂಗಪ್ಪ ಹೈಸ್ಕೂಲ್ ದಾಟಲಿಲ್ಲ. ಶಾಂತಲಿಂಗಪ್ಪ ಹೈಸ್ಕೂಲ್ ದಾಟಿದರು. ಕಾಲೇಜ್ ಸೇರಿ ಅದನ್ನೂ ದಾಟಿದರು. ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದರು. ಜ್ಯೂನಿಯರ್ ಕಾಲೇಜಿನಲ್ಲಿ ಉಪನ್ಯಾಸಕರೂ ಆದರು. ಸಮಯಾನುಸಾರ ಹಳ್ಳಿಯಲ್ಲಿ ತಂದೆ ಮಲ್ಲಣ್ಣ ಮೂವ್ವರು ಹೆಣ್ಣುಮಕ್ಕಳ ಮದುವೆಯನ್ನು ಮಾಡಿ ಮುಗಿಸಿದರು. ಈಗ ವ್ಯವಸಾಯ, ಮನೆ ಬಾಳ್ವೆ ಎಲ್ಲ ರಾಮಲಿಂಗಪ್ಪ ನೋಡಿಕೊಳ್ಳುತ್ತಿದ್ದ. ಶಾಂತಲಿಂಗಪ್ಪನವರ ಮದುವೆ ಬಹಳ ಸರಳವಾಗಿ ನಡೆಯಿತು. ಅವರೇ ಹಾಗೆ ಮಾಡಿಕೊಂಡರು. ಹೆತ್ತವರನ್ನು ಶಾಂತಲಿಂಗಪ್ಪ ತನ್ನ ಮನೆಯಲ್ಲಿಟ್ಟುಕೊಳ್ಳಲು ಪ್ರಯತ್ನಿಸಿದ. ಅವರು ಬರಲಿಲ್ಲ. ನಮ್ಮ ಹಳ್ಳಿಯೇ ನಮ್ಗ ಬೇಶ್ ಎಂದು ಹೇಳಿದರು. ಎಲ್ಲ ಸರಿಯಾಗಿ ನಡದಿತ್ತು ಎನ್ನುವಾಗ ರಾಮಲಿಂಗಪ್ಪನಿಗೆ ಅದ್ಯಾರು ಕೇಡನ್ನು ಮನಸ್ಸಿನಲ್ಲಿ ತುಂಬಿದರೋ ತಂದೆ-ತಾಯಿಗಳ ಆಸ್ತಿಯಲ್ಲಿ ಮಕ್ಕಳಿಬ್ಬರಿಗೆ ಅರ್ಧ ಅರ್ಧ ಪಾಲು ಇರುವುದು ಸಹಜ. ಆದ್ರೆ ರಾಮಲಿಂಗಪ್ಪ ತಂದೆಗೂ ತಿಳಿಯದೆ, ತಂದೆ ಕಡೆಯಿಂದಲೇ 'ಎಲ್ಲ ಆಸ್ತಿ ಹಿರಿಮಗನಿಗೆ ಕೊಡುತ್ತಿದ್ದೇನೆ' ಎಂದು ತಾನೇ ಪತ್ರ ಸಿದ್ಧ ಮಾಡಿ ಸಹಿ ಮಾಡಿಸಿಕೊಂಡದ್ದು ಶಾಂತಲಿಂಗಪ್ಪರಿಗೆ ಊರವರಿಂದ ತಿಳಿಯಿತು.

'ಬುದ್ಧಿಗೇಡಿ! ಕೇಳಬೇಕಿತ್ತು. ಬೇಕಾದ್ರೆ ಒಂದೋ ಎರಡೋ ಎಕರೆ ಹೊಲ ಹೆಚ್ಚಿಗೆ ಕೇಳಿ ಪಡಕೊಂಡಿದ್ದರೆ ನಾನು ತಕರಾರು ತೆಗೆಯುತ್ತಿರಲಿಲ್ಲ. ಅದು ಬಿಟ್ಟು ಈ ಕೆಟ್ಟ ಕೆಲ್ಸಕ್ಕೆ ಕೈ ಹಾಕಬಾರ್ದಿತ್ತು' ಎಂದು ಹಳ್ಳಿಗೆ ಹೋಗಿ ನೇರವಾಗಿಯೇ ವಿಚಾರಿಸಿದ. 'ನಿನ್ಗ ಸರ್ಕಾರಿ ನೌಕ್ರಿ ಐತೆ. ಅದೇ ಸಾಕು ನಿನ್ಗ. ನಾನು ಅಪ್ಪ-ಅಮ್ಮನನ್ನು ಸಾಕ್ತಿದ್ದೀನಿ' ಎಂದು ಖಂಡ ತುಂಡ ಮಾತಾಡಿದ ರಾಮಲಿಂಗಪ್ಪ. ತಂದೆ 'ನನ್ಗಿ ಅನುಮಾನ ಬಂತು! ಚಾಪಾ ಕಾಗ್ದದ ಮ್ಯಾಲೆ ಏನೋ ಸುಳ್ಳು ಹೇಳಿ ಸಹಿ ಮಾಡಿಸಿಕೊಂಡ' ಎಂದು ಹೇಳಿದ. ಶಾಂತಲಿಂಗಪ್ಪ ಅಣ್ಣನಿಗೆ 'ನಿನ್ಗ ಕಾನೂನು, ಕಾಯ್ದೆಗಳ ಗಂಧಗಾಳಿ ಗೊತ್ತಿಲ್ಲ. ನೀನು ಮಾಡಿದ್ದು ಸರಿಯಿಲ್ಲ. ಆಸ್ತಿಯಲ್ಲಿ ನನ್ಗೂ ಭಾಗ ಬರ್ತದೆ. ಮಂದಿ ಮಾತು ಕೇಳಿ ಅಡ್ಡ ದಾರಿ ಹಿಡಿಬೇಡಣ್ಣ' ಎಂದು ತಿಳಿ ಹೇಳಿದ. ರಾಮಲಿಂಗಪ್ಪ ಬಗ್ಗಲಿಲ್ಲ. 'ನೀನು ನಮ್ಮಳ್ಳಿಗೆ ಬರಬ್ಯಾಡ. ಬಂದರೆ ನಿನ್ನ ಕೈಕಾಲು ಮುರಿತೀನಿ' ಎಂದು ಧಮ್ಕಿ ಹಾಕಿದ. ಹಳ್ಳಿಯಲ್ಲಿ ಕೆಟ್ಟ ಮನಸ್ಸಿನ ಕೆಲವರನ್ನು ರಾಮಲಿಂಗಪ್ಪ ಬೇಕು ಮಾಡಿಕೊಂಡು ಶಾಂತಲಿಂಗಪ್ಪರಿಗೆ ಹೆದರಿಸಿದ. ತಂದೆ-ತಾಯಿಯನ್ನ ಕರೆತರುವ ಶಾಂತಲಿಂಗಪ್ಪನ ನಿರ್ಧಾರವನ್ನು ಹುಸಿಗೊಳಿಸಿದ. ತಂದೆ ಬರೆದಿಟ್ಟ ವಿಲ್ ಎಂಬಂತೆ ರಾಮಲಿಂಗಪ್ಪ ತಾನೇ ಬರೆದು ಸಹಿ ಮಾಡಿಸಿಕೊಂಡು 'ಹೆಚ್ಚಿಗೆ ಮಾತಾಡಿದ್ರೆ ಕೋರ್ಟಿಗೆ ಹೋಗ್ತೀನಿ' ಎಂದು ಬೆದರಿಸಿದ. ಶಾಂತಲಿಂಗಪ್ಪನವರ ಪತ್ನಿ ಗಂಡನಿಗೆ ಎದುರಾದ ಗಂಡಾಂತರವನ್ನು ಕೇಳಿ ತಿಳಿದು 'ಉಣ್ಣಕ ತಿನ್ನಕ ನಮ್ಗ ನೌಕ್ರಿಯ ಆಸರ ಐತೆ ಸಾಕು ಬಿಡ್ರಿ' ಅಂದಳು. 'ಅಣ್ಣನಿಗೆ ಔದಾರ್ಯ